## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:ಶ್ರೀ ಎಸ್.ಎಂ. ಸತೀಶ್‌ಬಾಬು, ಕೃಷಿ ಅಧಿಕಾರಿ ಹಾಗೂ ಇತರೇ ಕೃಷಿ ಸಹಾಯಕರುಗಳು ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಎಸಗಿದ ಕರ್ತವ್ಯ ಲೋಪ ಹಾಗೂ ತಾತ್ಕಾಲಿಕ ಹಣ ದುರುಪಯೋಗದ ಬಗ್ಗೆ ಶಿಸ್ತು ಕ್ರಮ ಕುರಿತು.

**ಓದಲಾಗಿದೆ:-**

1) ಸರ್ಕಾರದ ಕಾರಣ ಕೇಳುವ ಪತ್ರ ಸಂಖ್ಯೆ:ಕೃತೋಇ 80 ಕೃಪವಿ 2008, ದಿನಾಂಕ:18-06-2009,
2) ಸರ್ಕಾರದ ಆದೇಶ ಸಂಖ್ಯೆ:ಕೃತೋಇ 80 ಕೃಪವಿ 2008, ದಿನಾಂಕ:08-09-2010,
3) ಶ್ರೀ ಡಿ.ವಿ. ಶೇಠ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಧಾರವಾಡ, ಇವರ ವಿಚಾರಣಾ ವರದಿ ದಿನಾಂಕ:04-05-2013.

**ಪ್ರಸ್ತಾವನೆ:-**

ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ, ಈ ಕೆಳಕಂಡ ಅಧಿಕಾರಿ/ನೌಕರರುಗಳು 2006-07ನೇ ಸಾಲಿನಲ್ಲಿ ಧಾರವಾಡ ತಾಲ್ಲೂಕಿನಲ್ಲಿ ನಿರ್ಮಿಸಿದ ಸುವರ್ಣ ಕೃಷಿ ಹೊಂಡ ಕಾಮಗಾರಿಗಳಲ್ಲಿ ಕರ್ತವ್ಯ ನಿರ್ಲಕ್ಷ್ಯ ತೋರಿ ಅವ್ಯವಹಾರ ಎಸಗಿರುತ್ತಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ, ಅವರುಗಳ ಮೇಲೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಆರೋಪ ಪಟ್ಟಿಯನ್ನು ಮೇಲೆ ಕ್ರಮಾಂಕ(1)ರಲ್ಲಿ ಓದಲಾದ ಕಾರಣ ಕೇಳುವ ಪತ್ರವನ್ನು ಜಾರಿ ಮಾಡಲಾಗಿತ್ತು.

1) ಶ್ರೀ ಎಸ್. ಎಂ. ಸತೀಶಬಾಬು, ಕೃಷಿ ಅಧಿಕಾರಿ,
2) ಶ್ರೀ ಎಂ.ಎಸ್. ಬಶೆಟ್ಟಿ, ಹಿಂದಿನ ಕೃಷಿ ಸಹಾಯಕ,
3) ಶ್ರೀ ಬಿ.ಎಂ. ದೊಡ್ಡಮನಿ, ಹಿಂದಿನ ಕೃಷಿ ಸಹಾಯಕ(ನಿವೃತ್ತ)
4) ಶ್ರೀ ಸಿ.ಎಲ್. ತೊಂಡಿಹಾಳ್, ಕೃಷಿ ಸಹಾಯಕ(ನಿವೃತ್ತ)
5) ಶ್ರೀ ವೈ.ಕೆ. ಪೂಜಾರ್, ಹಿಂದಿನ ಕೃಷಿ ಸಹಾಯಕ,

ಸದರಿ ಕಾರಣ ಕೇಳುವ ಪತ್ರಕ್ಕೆ ಮೇಲ್ಕಂಡ ಅಧಿಕಾರಿ/ನೌಕರರು ನೀಡಿದ ಲಿಖಿತ ಹೇಳಿಕೆಗಳಲ್ಲಿನ ಸತ್ಯಾಸತ್ಯತೆಗಳ ಬಗ್ಗೆ ತಿಳಿಯಲು ಕ್ರಮಾಂಕ(2)ರಲ್ಲಿ ಓದಲಾದ ದಿನಾಂಕ:08-09-2010ರ ಸರ್ಕಾರದ ಆದೇಶದಲ್ಲಿ ಶ್ರೀ ಡಿ.ವಿ. ಶೇಠ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಧಾರವಾಡ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಅಧೀಕ್ಷಕರು, ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ. ಧಾರವಾಡ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಕ್ರಮಾಂಕ(3)ರಲ್ಲಿ ಓದಲಾದ ದಿನಾಂಕ:04-05-2013ರ ಪತ್ರದೊಂದಿಗೆ ವಿಚಾರಣಾಧಿಕಾರಿಯವರು ಪ್ರಕರಣದಲ್ಲಿ ವಿಚಾರಣೆ ನಡೆಸಿ, ವರದಿಯನ್ನು ಸಲ್ಲಿಸಿರುತ್ತಾರೆ. ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಶ್ರೀ ಎಸ್.ಎಂ. ಸತೀಶಬಾಬು, ಕೃಷಿ ಅಧಿಕಾರಿ, ಇವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ್ದು, ಶ್ರೀ ಎಸ್.ಎಂ. ಸತೀಶಬಾಬು ತಮ್ಮ ಕಾರ್ಯಾವಧಿಯಲ್ಲಿ ಒಟ್ಟು 283 ಕೃಷಿ ಹೊಂಡಗಳ ನಿರ್ಮಾಣಕ್ಕೆಂದು ಪಡೆದ ಹಣದಲ್ಲಿ ಕಾಮಗಾರಿಗಳನ್ನು ನಿರ್ವಹಿಸದೇ ಸದರಿ ಹಣವನ್ನು ತಾತ್ಕಾಲಿಕವಾಗಿ ದುರುಪಯೋಗ ಪಡಿಸಿಕೊಂಡಿರುತ್ತಾರೆಂಬ ಆಪಾದನೆಯು ಹಾಗೂ ಕಾಮಗಾರಿಗಳ ಪರಿಶೀಲನೆಗೆಂದು ಅಪರ ಕೃಷಿ ನಿರ್ದೇಶಕರು, (ಜಾಗೃತ ಕೋಶ), ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು, ಇವರು ಬಂದ ಸಂದರ್ಭದಲ್ಲಿ ಕಾಮಗಾರಿಗಳ ಪರಿವೀಕ್ಷಣೆಗೆ ಸಹಕರಿಸದೇ ಕರ್ತವ್ಯ ಲೋಪ ಎಸಗಿರುತ್ತಾರೆಂಬ ಆಪಾದನೆಗೆ ಸಂಬಂಧಿಸಿದಂತೆ ಮತ್ತು ಇತರೇ ಕೃಷಿ ಸಹಾಯಕರುಗಳಾದ ಶ್ರೀ ಎಂ.ಎಸ್.ಬಶೆಟ್ಟಿ, ಶ್ರೀ ಬಿ.ಎಂ.ದೊಡ್ಡಮನಿ, ಶ್ರೀ ಸಿ.ಎಲ್.ತೊಂಡಿಹಾಳ, ಮತ್ತು ಶ್ರೀ ವೈ.ಕೆ. ಪೂಜಾರ್‌ರವರುಗಳು ಸಹ ಕೃಷಿ ಹೊಂಡಗಳ ನಿರ್ಮಾಣಕ್ಕೆಂದು ಪಡೆದ ಮೊತ್ತವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂಬ ಆಪಾದನೆಗೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರ ಸಾಕ್ಷೀದಾರರುಗಳು ವಿಚಾರಣಾ ಪ್ರಾಧಿಕಾರದ ಮುಂದೆ ನೀಡಿದ ಹೇಳಿಕೆಗಳನ್ನು ಮತ್ತು ಆರೋಪಿತ ಸಂಬಂಧದ ದಸ್ತಾವೇಜುಗಳನ್ನು ಪರಿಶೀಲಿಸಿ, ಪ್ರಕರಣದಲ್ಲಿ ವಿಚಾರಣೆಗೆ ಗುರಿಪಡಿಸಿದ ಯಾರೊಬ್ಬರ ಮೇಲಿನ ಆಪಾದನೆಗಳು ರುಜುವಾತಾಗಿರುವುದಿಲ್ಲ ಎಂಬ ನಿರ್ಣಯವನ್ನು ನೀಡಿರುತ್ತಾರೆ.

ವಿಚಾರಣಾಧಿಕಾರಿಯವರ ಮೇಲ್ಕಂಡ ನಿರ್ಣಯದ ಹಿನ್ನಲೆಯಲ್ಲಿ ಪ್ರಕರಣದಲ್ಲಿ ವಿಚಾರಣೆಗೆ ಗುರಿಪಡಿಸಿದ ಮೇಲ್ಕಂಡ ಅಧಿಕಾರಿ/ನೌಕರರುಗಳನ್ನು ಅವರ ಮೇಲಿನ ಆರೋಪಗಳಿಂದ ಮುಕ್ತರನ್ನಾಗಿ ಮಾಡಲು ತೀರ್ಮಾನಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಕೃಇ 80 ಕೃಪವಿ 2008, ಬೆಂಗಳೂರು, ದಿನಾಂಕ:21-11-2013.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ ಇಲ್ಲಿ 2006-07ನೇ ಸಾಲಿನಲ್ಲಿ ಕೈಗೆತ್ತಿಕೊಂಡ ಕೃಷಿ ಹೊಂಡಗಳ ಕಾಮಗಾರಿಗಳಲ್ಲಿ ಅವ್ಯವಹಾರ ನಡೆಸಿರುತ್ತಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ, ವಿಚಾರಣೆಗೆ ಗುರಿಪಡಿಸಲಾದ ಈ ಕೆಳಕಂಡ ಅಧಿಕಾರಿ/ನೌಕರರುಗಳ ಮೇಲಿನ ಆರೋಪಗಳು ವಿಚಾರಣೆಯಲ್ಲಿ ಸಾಬೀತಾಗದ ಹಿನ್ನಲೆಯಲ್ಲಿ ಅವರುಗಳನ್ನು ಸದರಿ ಆರೋಪಗಳಿಂದ ಮುಕ್ತರನ್ನಾಗಿ ಮಾಡಿ ಆದೇಶಿಸಿದೆ.

1) ಶ್ರೀ ಎಸ್. ಎಂ. ಸತೀಶಬಾಬು, ಹಿಂದಿನ ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ,
2) ಶ್ರೀ ಎಂ.ಎಸ್. ಬಶೆಟ್ಟಿ, ಹಿಂದಿನ ಕೃಷಿ ಸಹಾಯಕ, ಗರಗ, ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ,

--3--

3) ಶ್ರೀ ಬಿ.ಎಂ. ದೊಡ್ಡಮನಿ, ಹಿಂದಿನ ಕೃಷಿ ಸಹಾಯಕ(ನಿವೃತ್ತ) ಹೆಬ್ಬಳ್ಳಿ, ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ,

4) ಶ್ರೀ ಸಿ.ಎಲ್. ತೊಂಡಿಹಾಳ್, ಕೃಷಿ ಸಹಾಯಕ(ನಿವೃತ್ತ), ತೇಗೂರು, ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ,

5) ಶ್ರೀ ವೈ.ಕೆ. ಪೂಜಾರ್, ಹಿಂದಿನ ಕೃಷಿ ಸಹಾಯಕ, ಅಮ್ಮಿನಬಾವಿ, ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ,

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ,

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-05) ಕರ್ನಾಟಕ ಬೆಂಗಳೂರು.
2) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು,
3) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು,
4) ಶ್ರೀ ಡಿ.ವಿ. ಶೇಠ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಆದರ್ಶ, ಸೈದಾಪೂರ, ಧಾರವಾಡ-58008, ಧಾರವಾಡ ಜಿಲ್ಲೆ,
5) ಜಂಟಿ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಧಾರವಾಡ,
6) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಧಾರವಾಡ,
7) ಸಂಬಂಧಪಟ್ಟ ಅಧಿಕಾರಿಯವರಿಗೆ ( ಆಯುಕ್ತರ ಮೂಲಕ)
8) ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ, ವಿಕಾಸಸೌಧ, ಬೆಂಗಳೂರು,
9) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
10) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.